ವಿಶೇಷ ವರದಿ

# ರಾಮಕೃಷ್ಣ ಮಿಷನ್ ವಿವೇಕಾನಂದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ

**(ಯು.ಜಿ.ಸಿ.ಕಾಯ್ದೆಯಡಿಯಲ್ಲಿ ಪರಿಗಣಿತ ವಿಶ್ವವಿದ್ಯಾನಿಲಯ [A DEEMED UNIVERSITY] )**

**ಸಂಗ್ರಹ: ವಿಜಯಕುಮಾರ್, ಮೈಸೂರು**

**ಸ್ವಾ**ಮಿ ವಿವೇಕಾನಂದರಿಂದ ಸ್ಥಾಪಿತವಾದ ರಾಮಕೃಷ್ಣ ಮಿಷನ್ ಜನತೆಯ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಬದುಕಿಗೆ ಹೊಸ ಚೈತನ್ಯವನ್ನು ನೀಡುತ್ತಾ ಬಂದಿರುವ ಒಂದು ಮಹತ್ವಪೂರ್ಣ ಸಂಚಲನವೆಂದು ಜಗತ್ಪ್ರಸಿದ್ಧವಾಗಿದೆ. ಇಂದು ದೇಶವಿದೇಶಗಳಲ್ಲಿ ತನ್ನ ಅನೇಕ ಶಾಖೆಗಳ ಮೂಲಕ ಜನತೆಯ ಸೇವೆಗೈಯುತ್ತಿರುವ ಸಂಸ್ಥೆಯ ಪ್ರಧಾನ ಕೇಂದ್ರ, ಕೊಲ್ಕತಾದ ಸಮೀಪದಲ್ಲಿರುವ ಬೇಲೂರು ಮಠದ ಬಗ್ಗೆ ಸುಮಾರು ೧೦೦ ವರ್ಷಗಳಿಗೂ ಹಿಂದೆಯೇ ದ್ರಷ್ಟಾರರಾದ ಸ್ವಾಮಿ ವಿವೇಕಾನಂದರು, 'ಭವಿಷ್ಯದಲ್ಲಿ ಈ ಸಂಸ್ಥೆಯು ಬೃಹತ್ ಪ್ರಮಾಣದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಜಾಗೃತಿಯ ಕೇಂದ್ರವಾಗುತ್ತದೆ...ಇದು ಬರೀ ನನ್ನ ಕಲ್ಪನೆಯಲ್ಲ... ನನಗಿದು ಸ್ಪಷ್ಟವಾಗಿ ಗೋಚರವಾಗುತ್ತಿದೆ'ಎಂದು ಮುಂದಿನ ಶತಮಾನಗಳಲ್ಲಿ ಸಂಸ್ಥೆ ವಹಿಸುವ ಪಾತ್ರವನ್ನು ಮನಗಾಣಿಸಿದ್ದರು. ಮತ್ತೊಂದು ಸಂದರ್ಭದಲ್ಲಿ, 'ನಮ್ಮ ಗುರಿ ಈ ಮಠವನ್ನು ಸರ್ವಾಂಗೀಣವಾದ ವಿಶ್ವವಿದ್ಯಾನಿಲಯವಾಗಿ ವಿಕಸಿಸುವಂತೆ ಮಾಡುವುದು' ಎಂದೂ ಸ್ವಾಮಿಜಿ ತಿಳಿಸಿದ್ದರು.



ಬೇಲೂರು ಮಠ


ಸ್ವಾಮಿಜಿಯವರ ಪಾವನವಾದ ಹೆಸರಿನಲ್ಲಿ ೨೦೦೫, ಜುಲೈ ೪ರಂದು ಆರಂಭಗೊಂಡಿರುವ ಪ್ರಸಕ್ತ ಪರಿಗಣಿತ ವಿಶ್ವವಿದ್ಯಾನಿಲಯವು, ಅವರ ವಿನೂತನವಾದ ಶೈಕ್ಷಣಿಕ ಸಿದ್ಧಾಂತಗಳ ಪ್ರಯೋಗಗಳಿಗೆ ಒಂದು ಕ್ಷೇತ್ರವಾಗಿದೆ. ಈ ದೇಶದ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಪರಂಪರೆಯ ಬಳುವಳಿಯಲ್ಲಿ ಅಡಕವಾಗಿರುವ ಸಾಂಪ್ರದಾಯಿಕ ಮೌಲ್ಯಗಳಾದ ಜ್ಞಾನನಿಷ್ಠೆ, ಶ್ರದ್ಧೆ, ಸತ್ಯಪ್ರಿಯತೆ ಮುಂತಾದುವುಗಳನ್ನು ಪಾಶ್ಚಾತ್ಯ ಮೌಲ್ಯಗಳಾದ ವೈಜ್ಞಾನಿಕ ಮನೋಧರ್ಮ, ನಾವು ಬದುಕುತ್ತಿರುವ ವಾಸ್ತವ ಪ್ರಪಂಚದ ಕುರಿತು ಯುಕ್ತಿಪೂರ್ಣ ಗವೇಷಣೆ, ವಿಜ್ಞಾನ ಮತ್ತು ತಾಂತ್ರಿಕತೆ, ಕಾರ್ಯದಕ್ಷತೆ, ಒಂದು ತಂಡವಾಗಿ ಕೆಲಸಮಾಡುವ ಸಾಮರ್ಥ್ಯ, ಕೈಗೊಂಡ ಕೆಲಸವನ್ನು ಬಿಡದೆ ಸಾಧಿಸುವ ತ್ರಿವಿಕ್ರಮನ ಛಲ, ಮುಂತಾದುವುಗಳೊಡನೆ ಮೇಳೈಸುವುದೇ ಈ ಸಂಸ್ಥೆಯ ಧ್ಯೇಯೋದ್ದೇಶ. ಇಂತಹ ಒಂದು ಉದಾತ್ತವಾದ ಆದರ್ಶವನ್ನು ಸಾಧಿಸಲು ಕಲೆ, ವಿಜ್ಞಾನ, ಅಧ್ಯಾತ್ಮ ಮೊದಲಾದ ಶಿಸ್ತುಗಳಲ್ಲಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಅವಕಾಶವನ್ನು ಕಲ್ಪಿಸುವ ಯೋಜನೆಯನ್ನು ಈ ಸಂಸ್ಥೆ ಹಮ್ಮಿಕೊಂಡಿದೆ. ಕಲೆಗಳ ವಿಭಾಗದಲ್ಲಿ, ಮಾನವೀಯ ವಿಜ್ಞಾನ ಹಾಗು ಸಾಮಾಜಿಕ ವಿಜ್ಞಾನಗಳ ಎಲ್ಲ ಶಾಖೆಗಳ ಮೂಲಭೂತ ಜ್ಞಾನದೊಂದಿಗೆ ಅಳವಡಿಸಲ್ಪಟ್ಟ ವಿಷಯಗಳ ಬೋಧನೆ, ವಿಜ್ಞಾನದ ವಿಷಯದಲ್ಲಿ ಮೂಲಭೂತ ವಿಜ್ಞಾನ ಹಾಗೂ ತಾಂತ್ರಿಕತೆ, ಹಾಗೂ ಅಧ್ಯಾತ್ಮಶಾಸ್ತ್ರದಡಿ ಮೌಲ್ಯಶಿಕ್ಷಣಕ್ಕೆ ವಿಶೇಷ ಪ್ರಾಧಾನ್ಯತೆ ನೀಡಲಾಗುತ್ತದೆ. **ಪರಿಗಣಿತ ವಿಶ್ವವಿದ್ಯಾನಿಲಯವೆಂದರೆ ಯಾವುದೋ ಒಂದು ಆವರಣಕ್ಕೆ ಸೀಮಿತವಾಗಿ ಕ್ರಿಯಾಶೀಲವಾಗಿರುವ ಒಂದೇ ಒಂದು ಸಂಸ್ಥೆಯಲ್ಲ. ಅದೊಂದು ಸಂಸ್ಥೆಗಳ ಒಕ್ಕೂಟವಾಗಿದ್ದು ಆ ಸಂಸ್ಥೆಗಳೆಲ್ಲವೂ ಬೇಲೂರು ಮಠದಲ್ಲಿ ತನ್ನ ಪ್ರಧಾನ ಕೇಂದ್ರವನ್ನು ಹೊಂದಿರುವ ರಾಮಕೃಷ್ಣ ಮಿಷನ್ನಿನ ಶಾಖೆಗಳಿಗೆ ಸೇರಿರುತ್ತವೆ. ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ರೂಪಿತವಾದ ಶೈಕ್ಷಣಿಕ ಪ್ರಯೋಗಗಳ ಮೂಲಕ ಸಾಮಾಜಿಕ ಪರಿವರ್ತನೆಯಲ್ಲಿ ರಾಮಕೃಷ್ಣ ಮಿಷನ್ನಿನ ಶಾಖೆಗಳು ಅನೇಕ ದಶಕಗಳಿಂದಲೂ ತಮ್ಮನ್ನು ತೊಡಗಿಸಿಕೊಂಡಿವೆ. ಈ ಸಾಧನೆಯಿಂದ ಲಭಿಸಿರುವ ಅಪಾರ ಅನುಭವ ಸಂಪತ್ತು ಮತ್ತು ಸಾಮರ್ಥ್ಯದಿಂದ ಈ ವಿಶ್ವವಿದ್ಯಾನಿಲಯದ ಉದಯವಾಗಿದೆ. ಈ ಅರ್ಥದಲ್ಲಿ, ಈ ಪರಿಗಣಿತ ವಿಶ್ವವಿದ್ಯಾನಿಲಯದ ಸ್ವರೂಪದಲ್ಲಿ ವೈಶಿಷ್ಟ್ಯವಿದೆ. ಈ ವ್ಯಾಪಕವಾದ ಭೂಮಿಕೆಯಲ್ಲಿ ಪ್ರಸಕ್ತ ವಿಶ್ವವಿದ್ಯಾನಿಲಯದ ಮೂಲಭೂತವಾದ ಹಾಗೂ ಅನನ್ಯವಾದ ವಿಶಿಷ್ಟತೆಯನ್ನು ಗ್ರಹಿಸಿದಲ್ಲಿ ಅದರ ಕಾರ್ಯವೈಖರಿಯನ್ನು ಹಾಗೂ ಅದರ ಶೈಕ್ಷಣಿಕ ಶಿಸ್ತಿನ ವಿವರಗಳನ್ನು ತಿಳಿದುಕೊಳ್ಳಲು ಕಷ್ಟವಾಗುವುದಿಲ್ಲ.**



ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಭಾರತದ ಇತರ ಪ್ರಚಲಿತ ವಿಶ್ವವಿದ್ಯಾನಿಲಯಗಳಲ್ಲಿ ಕಡೆಗಣಿಸಲಾಗಿರುವ ನಾಲ್ಕು ಮುಖ್ಯ ಅಧ್ಯಯನ ಕ್ಷೇತ್ರಗಳಿಗೆ ಪ್ರಾಧಾನ್ಯವಿತ್ತು ಊರ್ಜಿತಗೊಳಿಸುವುದೇ ಈ ಪರಿಗಣಿತ ವಿಶ್ವವಿದ್ಯಾನಿಲಯದ ಮೂಲ ಉದ್ದೇಶ. ದೇಶದ ಪ್ರಗತಿಗೆ ಅಗತ್ಯವಾದ ಈ ಕ್ಷೇತ್ರಗಳ ಅಧ್ಯಯನ ನಡೆಯದೆ ಉಂಟಾಗಿರುವ ಕೊರತೆಯನ್ನು ತುಂಬುವ ಹೊಣೆಯನ್ನು ಪ್ರಸಕ್ತ ಪರಿಗಣಿತ ವಿಶ್ವವಿದ್ಯಾನಿಲಯವು ಹೊತ್ತಿದೆ. ಇದಕ್ಕೆ ಅಗತ್ಯವಿರುವ ಪ್ರೇರಣೆ ಹಾಗೂ ಪರಿಣತಿಯನ್ನು ಹೊಂದಿರುವುದೇ ರಾಮಕೃಷ್ಣ ಮಿಷನ್ನಿನ ವೈಶಿಷ್ಟ್ಯ. ಈ ವಿಶೇಷ ಅಧ್ಯಯನ ಕ್ಷೇತ್ರಗಳ ಶಾಸ್ತ್ರೀಯವಾದ ಬೋಧನೆ, ಹಾಗೂ ತರಬೇತಿಗೆ ಬೇಕಾದ ನುರಿತ ಕೋವಿದರನ್ನು ಹಾಗೂ ಸಂಸ್ಥೆಗಳನ್ನು ರಾಮಕೃಷ್ಣ ಮಿಷನ್ ಹೊಂದಿರುವುದಲ್ಲದೆ ಅವುಗಳ ಪ್ರಯೋಗಶೀಲತೆಗೆ ಬೇಕಾದ ಸೌಕರ್ಯಗಳನ್ನು ಅಳವಡಿಸಿ ಉತ್ತಮಗೊಳಿಸುವುದರ ಸಾಧ್ಯತೆಯಿದೆ. ಕೆಳಗೆ ಕಾಣಿಸಿದ ಪ್ರಧಾನ ಕ್ಷೇತ್ರಗಳು ಪರಿಗಣಿತ ವಿಶ್ವವಿದ್ಯಾನಿಲಯದ ವಿಶೇಷ ಪರಿಣತಿಯ ಕೇಂದ್ರಗಳಾಗಿವೆ. ಈ ಕ್ಷೇತ್ರಗಳು ಹಾಗೂ ಶಾಖಾಕೇಂದ್ರಗಳು ಹೀಗಿವೆ:

೧. **ವೈಕಲ್ಯತೆಗಳ ನಿರ್ವಹಣೆ, ಮತ್ತು ವಿಶೇಷ ಶಿಕ್ಷಣ** (Disability Management and Special Education)- ತಮಿಳು ನಾಡಿನ ಕೊಯಮತ್ತೂರಿನಲ್ಲಿರುವ ಅಂತಾರಾಷ್ಟ್ರೀಯ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಕೇಂದ್ರ – ಈ ಸಂಸ್ಥೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ವಿಶೇಷ ಶಿಕ್ಷಣದ ವೃತ್ತಿಪರರ ತರಬೇತಿಯಲ್ಲಿ ನಿರತವಾಗಿದೆ. ರಾಮಕೃಷ್ಣ ಮಿಷನ್ ನರೇಂದ್ರಪುರ ಅಂಧಬಾಲಕರ ಅಕಾಡೆಮಿಯೂ ಇದರಲ್ಲಿ ಒಳಗೊಳ್ಳುತ್ತದೆ.

೨. **ಗಿರಿಜನಕ್ಷೇಮಾಭಿವೃದ್ಧಿಯನ್ನು ಒಳಗೊಂಡಿರುವ ಸಮಗ್ರ ಗ್ರಾಮೀಣಾಭಿವೃದ್ಧಿ** (Integrated Rural Development including Tribal Development) – ಜಾರ್ಖಂಡ್ ರಾಜ್ಯದ ರಾಂಚಿಯಲ್ಲಿರುವ ಮೊರಾಬಾದಿಯ ರಾಮಕೃಷ್ಣ ಮಿಷನ್ ಆಶ್ರಮ; ರಾಮಕೃಷ್ಣ ಮಿಷನ್ ಲೋಕಶಿಕ್ಷಾ ಪರಿಷತ್, ನರೇಂದ್ರಪುರ, ಪಶ್ಚಿಮ ಬಂಗಾಳ; ರಾಮಕೃಷ್ಣ ಮಿಷನ್ ಸಮಾಜಸೇವಾ ಶಿಕ್ಷಣ ಮಂದಿರ, ಬೇಲೂರು, ಪಶ್ಚಿಮ ಬಂಗಾಳ; ಛತ್ತಿಸ್‌ಘಡ್ ರಾಜ್ಯದ ಬಸ್ತರ್ ಜಿಲ್ಲೆಯ ನಾರಾಯಣಪುರ ಶಾಖೆಯ ಅಭುಜ್‌ಮರ್ ಗಿರಿಜನ ಸೇವಾಕೇಂದ್ರ; ಮೇಘಾಲಯದ ಚಿರಾಪುಂಜಿ, ಶಿಲಾಂಗ್; ಅರುಣಾಚಲ ಪ್ರದೇಶದಲ್ಲಿನ ಅಲಾಂಗ್, ಇಟಾನಗರ್ ಮತ್ತು ನರೋತ್ತಮ್ ನಗರ.



ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು;

೩. **ಭಾರತೀಯ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಪರಂಪರೆ ಮತ್ತು ಮೌಲ್ಯಶಿಕ್ಷಣ** (Indian Cultural & Spiritual Heritage and Value Education) – ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು; ಕೊಲ್ಕತಾದ ಗೊಲ್ ಪಾರ್ಕ್‌ನಲ್ಲಿನ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ಮತ್ತು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿರುವ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ.

೪. **ವಿಪತ್ತಿನ ನಿರ್ವಹಣೆ ಪರಿಹಾರ ಮತ್ತು ಪುನರ್ವಸತಿ ಯೋಜನೆಯನ್ನು ಒಳಗೊಂಡ ವಿಪತ್ತಿನ ನಿರ್ವಹಣೆ**: (Disaster Management including Relief and Rehabilitation) – ಈಗಾಗಲೇ ಪರಿಹಾರ ಹಾಗೂ ಪುನರ್ವಸತಿಯಲ್ಲಿ ಅನುಭವ ಗಳಿಸಿದ ರಾಮಕೃಷ್ಣ ಮಿಷನ್ನಿನ ಶಾಖೆಗಳು.



ವಿವೇಕಾನಂದ ಸಂಶೋಧನಾ ಕೇಂದ್ರ, ಕೊಲ್ಕತಾ

**ಮೂಲಭೂತ ವಿಜ್ಞಾನ ಹಾಗೂ ದರ್ಶನಗಳ ವಿವೇಕಾನಂದ ಅಧ್ಯಯನ ಕೇಂದ್ರ ಹಾಗೂ ವಿವೇಕಾನಂದ ಸಂಶೋಧನಾ ಕೇಂದ್ರ, (Vivekananda School of Fundamental Science & Philosophy and Vivekananda Research Centre):**

ನೂತನವಾಗಿ ರೂಪುಗೊಂಡಿರುವ ಪರಿಗಣಿತ ವಿಶ್ವವಿದ್ಯಾನಿಲಯದ ಒಂದು ಮುಖ್ಯ ಚಟುವಟಿಕೆಯ ಕೇಂದ್ರ ಇದು. ವಿವೇಕಾನಂದ ಸಂಶೋಧನಾ ಕೇಂದ್ರವು ಕೊಲ್ಕತಾದಲ್ಲಿರುವ ಸ್ವಾಮಿಜಿಯವರ ಜನ್ಮಸ್ಥಾನದಲ್ಲಿ ಸ್ಥಾಪಿತವಾಗಿದೆ. ಭಾರತೀಯ ಸಂಸ್ಕೃತಿ ಹಾಗೂ ದರ್ಶನಗಳ, ರಾಮಕೃಷ್ಣ ವಿವೇಕಾನಂದ ಚಿಂತನೆಗಳ, ವೇದಾಂತ ಮತ್ತು ಆಧುನಿಕ ವಿಜ್ಞಾನಗಳ, ಪ್ರಜ್ಞಾ ಪ್ರವಾಹದ ಅಧ್ಯಯನ, ಮೂಲಭೂತ ವಿಜ್ಞಾನಗಳ ಶಾಸ್ತ್ರೀಯ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತದೆ.

ಭಾರತ ಹಾಗೂ ವಿಶ್ವದ ಎಲ್ಲೆಡೆ ಜಾತಿ, ಮತ, ಜನಾಂಗದ ಭೇದವಿಲ್ಲದೆ, ಜನತೆಗೆ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅಗತ್ಯವಾದ ಪ್ರೇರಣೆ ಮತ್ತು ಸ್ಫೂರ್ತಿಗಳನ್ನು ರಾಮಕೃಷ್ಣ–ವಿವೇಕಾನಂದರ ಜೀವನ ಸಂದೇಶಗಳಿಂದ ಪಡೆಯಲು ಅನುಕೂಲವಾಗುವಂತೆ ಮಾಡುವುದೇ ವಿವೇಕಾನಂದ ಸಂಶೋಧನಾ ಕೇಂದ್ರದ ಪ್ರಮುಖ ಉದ್ದೇಶವಾಗಿದೆ. ಈ ಕಾರಣಕ್ಕಾಗಿ ಭಾರತದ ಹಾಗೂ ವಿಶ್ವದ ಇತರ ಭಾಗಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆ, ಸಾಮಾಜಿಕ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ರಾಮಕೃಷ್ಣ ವಿವೇಕಾನಂದರ ಜೀವನ ಸಂದೇಶಗಳನ್ನು ಅಧ್ಯಯನ ಮಾಡಿ ಅರ್ಥೈಸುವುದರಲ್ಲಿ ಈ ಸಂಶೋಧನಾ ಕೇಂದ್ರವು ತನ್ನನ್ನು ತೊಡಗಿಸಿಕೊಳ್ಳುತ್ತದೆ.

ತಮ್ಮ ಸಮಕಾಲೀನ ವಿಜ್ಞಾನಿಗಳಾಗಿದ್ದ ಜೆಮ್‌ಶೆಡ್‌ಜಿ ಟಾಟಾ ಅವರೊಡನೆ ನಡೆಸಿದ ಮಾತುಕತೆಗಳಿಂದ ಮೂಲಭೂತ ವಿಜ್ಞಾನದ ಅಧ್ಯಯನ ಸ್ವಾಮಿ ವಿವೇಕಾನಂದರ ವಿಶೇಷ ಗಮನ ಸೆಳೆದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅದರ ದ್ಯೋತಕವಾಗಿ ಈ ವಿಶ್ವವಿದ್ಯಾನಿಲಯವು ವೈಜ್ಞಾನಿಕ ಮನೋಭಾವ ಹಾಗೂ ವಾಸ್ತವಿಕ ಸಂಶೋಧನೆಯ ಹೊಸ ದೃಷ್ಟಿಯನ್ನು ಭಾರತೀಯರಲ್ಲಿ ಮೂಡಿಸಲು ಪ್ರಯತ್ನಿಸುವುದು. ಈ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಯ.ಜಿ.ಸಿ ಕಾಯಿದೆಯಡಿ ಪ್ರತಿಯೊಂದು ಅಧ್ಯಯನದ ಶಿಸ್ತಿನ ಬೋಧನೆಗಾಗಿ ಅರೆಕಾಲಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಪರಿಗಣಿತ ವಿಶ್ವವಿದ್ಯಾನಿಲಯದ ಚಟುವಟಿಕೆಯ ವ್ಯಾಪ್ತಿಯು ವಿಸ್ತಾರವಾಗುತ್ತ ಹೋದಂತೆ ನೂತನ ಶಾಖಾಕೇಂದ್ರಗಳನ್ನು ಇದರೊಡನೆ ಸೇರಿಸಿಕೊಳ್ಳಲಾಗುತ್ತದೆ.

**ಈ ಪರಿಗಣಿತ ವಿಶ್ವವಿದ್ಯಾನಿಲಯದ ಪಠ್ಯಕ್ರಮ ಅಥವಾ ಕೋರ್ಸ್‌ಗಳು**

ಈ ವಿಶ್ವವಿದ್ಯಾನಿಲಯದಲ್ಲಿ ದೀರ್ಘಾವಧಿ ಹಾಗೂ ಅಲ್ಪಕಾಲಿಕ ಕೋರ್ಸ್‌ಗಳ ಕಡೆ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ದೀರ್ಘಾವಧಿ ಕೋರ್ಸ್‌ಗಳು ವಿಶ್ವವಿದ್ಯಾನಿಲಯದ ಪ್ರಧಾನ ಕ್ಷೇತ್ರಗಳಲ್ಲಿ ಪರಿಣಿತರನ್ನು ತಯಾರುಗೊಳಿಸುವಲ್ಲಿ ನಿರತವಾಗಿರುತ್ತದೆ. ಅಲ್ಪಾವಧಿ ಕೋರ್ಸ್‌ನ ಕಾರ್ಯಕ್ರಮಗಳು ಈಗಾಗಲೇ ಸೇವೆಯಲ್ಲಿರುವ ಉಪಾಧ್ಯಾಯರಿಗೆ, ಸಮುದಾಯ ಸದಸ್ಯರಿಗೆ ಹಾಗೂ ಜವಾಬ್ದಾರಿಯುತ ಹುದ್ದೆಗಳಲ್ಲಿರುವವರಿಗೆ ತಮ್ಮ ಶಿಕ್ಷಣದ ಅವಧಿಯಲ್ಲಿ ಶಾಲೆ ವಿಶ್ವವಿದ್ಯಾನಿಲಯಗಳಲ್ಲಿ ತಾವು ಕಲಿತಿರದ ಶಿಕ್ಷಣದ ಶಿಸ್ತನ್ನು ನೀಡಲು ಪ್ರಯತ್ನಿಸುತ್ತದೆ. ಸಾಮಾಜಿಕ ವಿಜ್ಞಾನ, ಧರ್ಮ, ಹಾಗೂ ತಾಂತ್ರಿಕ ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ನೂತನವಾಗಿ ಆವಿಷ್ಕಾರಗೊಂಡ ವಿಷಯಗಳನ್ನು ಅವರಿಗೆ ಪರಿಚಯಿಸುವುದರ ಮೂಲಕ ತಮ್ಮ ತಮ್ಮ ಸೇವಾಕ್ಷೇತ್ರಗಳಲ್ಲಿ ವಿಶಿಷ್ಟವಾದ ಕೊಡುಗೆಗಳನ್ನು ನೀಡಲು ಸಹಾಯಕವಾಗುವಂತೆ ಈ ಕಾರ್ಯಕ್ರಮಗಳಿರುತ್ತವೆ. ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಗಳಲ್ಲಿ ದೀರ್ಘಾವಧಿ ಕೋರ್ಸ್‌ಗಳು ಹಾಗೂ ೬–ತಿಂಗಳುಗಳ ಸರ್ಟಿಫಿಕೇಟ್ ಕೋರ್ಸ್‌ನಿಂದ ಹಿಡಿದು ೩ ದಿನಗಳ ರಿಫ್ರೆಷರ್ ಕೋರ್ಸ್‌ವರೆಗೂ ಕಾರ್ಯಕ್ರಮಗಳನ್ನು ನಡೆಸುವ ಯೋಜನೆಯನ್ನು ಈ ವಿಶ್ವವಿದ್ಯಾನಿಲಯ ಹಮ್ಮಿಕೊಂಡಿದೆ.

ಈ ಸಹಸ್ರಮಾನವನ್ನು ಜ್ಞಾನಪ್ರಧಾನ ಸಹಸ್ರಮಾನ (Knowledge Millennium) ಎಂದೇ ನಮ್ಮ ರಾಷ್ಟ್ರನಾಯಕರು ಘೋಷಿಸುತ್ತ ಬಂದಿದ್ದಾರೆ. ದಿಗ್ಭ್ರಮೆಗೊಳಿಸುವ ವೇಗದಲ್ಲಿ ದಾಪುಗಾಲು ಹಾಕುತ್ತಿರುವ ಮಾಹಿತಿ ತಂತ್ರಜ್ಞಾನವು ಹೊಸ ಅವಕಾಶಗಳನ್ನು ಈ ದೇಶದ ಮುಂದೆ ತೆರೆದಿಟ್ಟಿದೆ. ಆದರೆ ಇವೆಲ್ಲವೂ ಜನಸಾಮಾನ್ಯರ ಬದುಕಿನ ಗುಣಮಟ್ಟವನ್ನು ಉತ್ತಮಗೊಳಿಸುವುದರಲ್ಲಿ ಸಹಾಯಕಾರಿಯಾಗಿಲ್ಲದಿರುವುದು ಕಹಿಯಾದ ಸತ್ಯ. ಬಡಜನರ ಬದುಕು ದುರ್ಭರಗೊಂಡು ಹೆಚ್ಚು ಹೆಚ್ಚು ಸಂಕಷ್ಟಗಳಿಗೀಡಾಗುತ್ತಿದೆ. ಇದಕ್ಕೆ ಕಾರಣ ತಾಂತ್ರಿಕ ಸೌಲಭ್ಯಗಳ ಅಥವಾ ಭೌತಿಕ ಸಂಪನ್ಮೂಲಗಳ ಕೊರತೆಯಲ್ಲ. ಮಾನವೀಯ ಅನುಕಂಪೆಯುಳ್ಳ ವ್ಯಕ್ತಿಗಳನ್ನು ನಿರ್ಮಿಸುವಲ್ಲಿ ನಮ್ಮ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿರುವುದು. ನೈತಿಕ ಹಾಗು ಸಾಮಾಜಿಕ ಹೊಣೆಯನ್ನರಿತ ವ್ಯಕ್ತಿಗಳ ನಿರ್ಮಾಣದ ದೊಡ್ಡ ಸವಾಲು ನಮ್ಮ ಶಿಕ್ಷಣ ವ್ಯವಸ್ಥೆಯ ಮುಂದಿದೆ. ಅಂತಹ ಸವಾಲನ್ನು ಸ್ವೀಕರಿಸಿರುವ ರಾಮಕೃಷ್ಣ ಮಿಷನ್ನಿನ ಈ ದಿಟ್ಟ ಹೆಜ್ಜೆ ಇತಿಹಾಸದ ಸಂಕ್ರಮಣ ಕಾಲದಲ್ಲಿನ ಒಂದು ಮೈಲುಗಲ್ಲು ಎಂದೇ ಹೇಳಬಹುದು.

ಸ್ವಾಮಿ ವಿವೇಕಾನಂದರು ಜ್ಞಾನೋಪಾಸನೆ ಹಾಗೂ ಅಂತಹ ಉಪಾಸನೆಯಿಂದ ಸಿದ್ಧಿಸಿದ ವರಗಳನ್ನು ಸಮಾಜದ ಏಳ್ಗೆಗಾಗಿ, ವಿಶೇಷವಾಗಿ ನಿಮ್ನ ವರ್ಗದವರ ಏಳ್ಗೆಗಾಗಿ, ಬಳಸುವ ಕನಸನ್ನು ಕಂಡಿದ್ದರು. ಅವರ ಕನಸನ್ನು ಸಾಕಾರಗೊಳಿಸುವ ಮಹತ್ವಾಕಾಂಕ್ಷೆಯನ್ನು ಹೊತ್ತು ಉದಯವಾಗಿರುವ **ರಾಮಕೃಷ್ಣ ಮಿಷನ್ನಿನ ಆಶ್ರಯದ ಈ ನೂತನ ಪರಿಗಣಿತ ವಿಶ್ವವಿದ್ಯಾನಿಲಯವನ್ನು–ಒಂದು ಶೈಕ್ಷಣಿಕ ಸಂಸ್ಥೆ ಎನ್ನುವುದಕ್ಕಿಂತಲೂ, ಜಾಗತಿಕ ಮಟ್ಟದ ಒಂದು ಶೈಕ್ಷಣಿಕ ಕ್ರಾಂತಿ ಎಂದರೆ ಹೆಚ್ಚು ಸೂಕ್ತವಾದೀತು.**




ಪೂಜ್ಯ ಸ್ವಾಮಿ ಗಹನಾನಂದಜಿ ಅವರಿಂದ ದೀಪ ಬೆಳಗಿಸಿ ಉದ್ಘಾಟನೆ. ಪಕ್ಕದಲ್ಲಿ, ಪ್ರಥಮ ಉಪಕುಲಪತಿಗಳಾದ ಸ್ವಾಮಿ ಆತ್ಮಪ್ರಿಯಾನಂದಜಿ.




ಪೂಜ್ಯ ಸ್ವಾಮಿ ಗಹನಾನಂದಜಿ ಅವರಿಂದ ಆಶೀರ್ವಚನ. ಎಡದಿಂದ, ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ, ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮತ್ತು ಉಪಕುಲಪತಿಗಳಾಗಿ ನೇಮಕಗೊಂಡಿರುವ ಸ್ವಾಮಿ ಆತ್ಮಪ್ರಿಯಾನಂದಜಿ.

**ಈ ವಿಶ್ವವಿದ್ಯಾನಿಲಯಕ್ಕೆ ಸಹೃದಯ ದಾನಿಗಳ ನೆರವಿಗೆ ಕರೆ:**

**ರಾಮಕೃಷ್ಣ ಮಿಷನ್ ವಿವೇಕಾನಂದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ ಎಂಬ ಈ ನೂತನ ಪರಿಗಣಿತ ವಿಶ್ವವಿದ್ಯಾನಿಲಯವು ಯು.ಜಿ.ಸಿ.ಕಾಯಿದೆಯಡಿ ಇದೀಗ ತಾನೇ ಆರಂಭಗೊಂಡಿದ್ದು ಇದರ ಸಂಚಾಲನೆಗಾಗಿ ಕೇಂದ್ರ ಸರ್ಕಾರಕ್ಕೆ ಸಹಾಯಧನಕ್ಕಾಗಿ ತನ್ನ ಕೋರಿಕೆಯನ್ನು ಸಲ್ಲಿಸಿದೆ. ಈ ನೂತನ ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು ಅಪಾರ ವ್ಯಾಪ್ತಿಯುಳ್ಳದ್ದಾಗಿದ್ದು, ಪ್ರಜ್ಞಾವಂತ ಸಾರ್ವಜನಿಕರ ಸಹಕಾರದಿಂದ ಮಾತ್ರ ಅವುಗಳನ್ನು ಸಾಧಿಸಲು ಸಾಧ್ಯ. ಈ ಮಹಾನ್ ಕಾರ್ಯದಲ್ಲಿ ಉದಾರ ಹಸ್ತದಿಂದ ಧನಸಹಾಯ ನೀಡಲು ರಾಮಕೃಷ್ಣ ವಿವೇಕಾನಂದರ ಭಕ್ತಾದಿಗಳಲ್ಲಿ, ಸಾರ್ವಜನಿಕರಲ್ಲಿ, ವಿಶೇಷವಾಗಿ ಜ್ಞಾನಪ್ರಸಾರದಲ್ಲಿ ಆಸಕ್ತರಾಗಿರುವವರಲ್ಲಿ, ಕಳಕಳಿಯಿಂದ ವಿನಂತಿಸುತ್ತೇವೆ. ಚೆಕ್ ಮತ್ತು ಡಿ.ಡಿ.ಗಳನ್ನು Ramakrishna Mission VERI, Belur Math, ಹೆಸರಿನಲ್ಲಿ ಇಲ್ಲಿ ಕೊಟ್ಟಿರುವ ವಿಳಾಸಕ್ಕೆ ಕಳುಹಿಸಿ. ರಾಮಕೃಷ್ಣ ಮಿಷನ್ನಿಗೆ ನೀಡುವ ಎಲ್ಲ ದೇಣಿಗೆಗಳಿಗೂ 80G ಕಾಯಿದೆಯಡಿ ತೆರಿಗೆ ರಿಯಾಯಿತಿ ಲಭ್ಯವಿರುತ್ತದೆ.**

ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಈ ಪರಿಗಣಿತ ವಿಶ್ವವಿದ್ಯಾನಿಲಯ ಪ್ರಾಧಾನ್ಯ ಕೊಟ್ಟಿರುವ ಕ್ಷೇತ್ರಗಳಲ್ಲಿ ಬರೀ ಪುಸ್ತಕಪಂಡಿತರಾಗಿರದೆ, ತಮ್ಮ ವೈಯಕ್ತಿಕ ಚಾರಿತ್ರ್ಯ ನಿರ್ಮಾಣದ ಮೂಲಕ ಸಾಮಾಜಿಕ ಹೊಣೆಯನ್ನರಿತ ಪ್ರಜ್ಞಾವಂತ ನಾಗರಿಕರಾಗಿರುತ್ತಾರೆ. ರಾಷ್ಟ್ರಜೀವನದ ದಧೀಚಿಗಳಾಗಿ ದೇಶವನ್ನು ಕಟ್ಟುವ ಮಹತ್ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರಾಗಿರುತ್ತಾರೆ.

### ಉದ್ಘಾಟನಾ ಸಮಾರಂಭ

ಸ್ವಾಮಿ ವಿವೇಕಾನಂದರು ಜುಲೈ ೪ರ ಕುರಿತು ತಮ್ಮ ಒಂದು ಕವನವನ್ನು ರಚಿಸಿರುವುದನ್ನೂ ಹಾಗೂ ಕವನ ರಚಿಸಿ ಕೆಲವೇ ವರ್ಷಗಳ ನಂತರ ಅದೇ ದಿನಾಂಕದಂದು ತಮ್ಮ ದೇಹತ್ಯಾಗ ಮಾಡಿರುವುದನ್ನು ನೆನೆಸಿಕೊಂಡಾಗ ಜಾಗತಿಕ ಸಂದರ್ಭದಲ್ಲಿ ವಿಶೇಷ ಮಹತ್ವವನ್ನು ಪಡೆದ ದಿನ ಎನಿಸದೆ ಇರದು. ಈ ವರ್ಷದ ಜುಲೈ ೪ರಂದು ರಾಮಕೃಷ್ಣ ಮಿಷನ್ ತಮ್ಮ ನಾಯಕನ ಆಣತಿಯನ್ನು ಪಾಲಿಸುವ ತನ್ನ ಸಂಕಲ್ಪವನ್ನು ನವೀಕರಿಸಿತು.

ಜುಲೈ ೪ರಂದು ರಾಮಕೃಷ್ಣ ಮಿಷನ್ ವಿವೇಕಾನಂದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ—ಯು.ಜಿ.ಸಿ. ಕಾಯಿದೆಯಡಿಯ ಪರಿಗಣಿತ ವಿಶ್ವವಿದ್ಯಾನಿಲಯದ ಉದ್ಘಾಟನೆಯಾಯಿತು. ರಾಮಕೃಷ್ಣ ಮಹಾಸಂಘದ ಮುಖ್ಯ ಕಾರ್ಯಾಲಯ, ಬೇಲೂರು ಮಠದಲ್ಲಿರುವ ವಿವೇಕಾನಂದ ಸಭಾಗೃಹದಲ್ಲಿ ಬೆಳಿಗ್ಗೆ ೧೦.೧೫ಕ್ಕೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಭಾಗವಹಿಸಿ ಆಶೀರ್ವಚನ ನೀಡಿದರು.

ಅದೇ ದಿನದಂದು ಮಧ್ಯಾಹ್ನ ೧೨.೩೦ಕ್ಕೆ ಕೊಲ್ಕತಾದಲ್ಲಿರುವ ಸ್ವಾಮಿ ವಿವೇಕಾನಂದರ ಜನ್ಮಸ್ಥಳದಲ್ಲಿ ನಿರ್ಮಿತವಾಗಿರುವ ವಿವೇಕಾನಂದ ಸಂಶೋಧನಾ ಕೇಂದ್ರದ ಉದ್ಘಾಟನೆಯಾಯಿತು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜ್ ಆಶೀರ್ವಚನವನ್ನು ನೀಡಿದರು.

**ಈ ಪರಿಗಣಿತ ವಿಶ್ವವಿದ್ಯಾನಿಲಯದ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:**

**Vice-Chancellor**
**Ramakrishna Mission Vivekananda Educational and Research Institute (RKMVERI)**
**P.O. Belur Math. Dist: Howrah, West Bengal - 711202**
**e-mail: rkmveri@gmail.com**

*